ಓ. ಎಸ್. ನಂಃ 119/2022

**ಪಿ.ಡಬ್ಲ್ಯೂಃ 1**

**ದಿನಾಂಕಃ 03-07-2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಯು. ಬಿ. ಜೆ. ವಕೀಲರಿಂದಃ**

ನನ್ನ ಗಂಡ ಪುಟ್ಟಪ್ಪ ನೂಲಗೇರಿ ಹಾಗೂ 1ನೇ ಪ್ರತಿವಾದಿಯ ಗಂಡ ಕರಬಸಪ್ಪ ನೂಲಗೇರಿ ಅಣ್ಣ ತಮ್ಮಂದಿರು ಎಂದರೆ ಸರಿ. ಸದರಿ ಕರಬಸಪ್ಪ ನೂಲಗೇರಿ ಹುಟ್ಟು ಮೂಗ ಎಂದರೆ ಸರಿ. 2 ನೇ ಪ್ರತಿವಾದಿಯು ಸಹ ಹುಟ್ಟು ಮೂಗ ಎಂದರೆ ಸರಿ. ಕುಟುಂಬದ ಸ್ವತ್ತುಗಳಿಗೆ ಸಂಬಂಧಿಸಿದಂತೆ ನನ್ನ ಗಂಡನ ಸಹೋದರಿಯರು ಓ.ಎಸ್. ನಂಃ 25/2008 ರಂತೆ ಹಿಸ್ಸೆ ದಾವಾ ಮಾಡಿದರು ಎಂದರೆ ಸರಿ. ಸದರಿ ದಾವೆಯಲ್ಲಿ ನಾವು ಹಾಗೂ ಸದರಿ ಕರಬಸಪ್ಪ ನೂಲಗೇರಿರವರು ಪ್ರತಿವಾದಿಗಳು ಆಗಿದ್ದರು ಎಂದರೆ ಸರಿ. ಸದರಿ ದಾವೆ ಭಾಗಶಃ ಪುರಸ್ಕರಿಸಿದ್ದು, ದಾವಾ ಆಸ್ತಿಯನ್ನು ಹೊರತುಪಡಿಸಿ ಜಮೀನುಗಳಲ್ಲಿ ಮಾತ್ರ ಹಿಸ್ಸೆಗೆ ಆದೇಶವಾಗಿರುತ್ತದೆ. ಸದರಿ ದಾವೆಯಲ್ಲಿ ನಾವು ಮಾತ್ರ ತಕರಾರು ಸಲ್ಲಿಸಿದೇವು ಎಂದರೆ ಸರಿ. ಕರಬಸಪ್ಪ ತಕರಾರು ಸಲ್ಲಿಸಿರುವುದಿಲ್ಲ ಎಂದರೆ ಸರಿ.

2. ದಾವಾ ಸ್ವತ್ತನ್ನು ಯಾವಾಗ ಖರೀದಿಸಲಾಯಿತು ಎಂದು ನನಗೆ ನಿರ್ಧಿಷ್ಟವಾಗಿ ಗೊತ್ತಿರುವುದಿಲ್ಲ. ನನ್ನ ಗಂಡ ಹಾಗೂ ಕರಬಸಪ್ಪ ಒಟ್ಟಿಗೆ ದುಡಿದು ಖರೀದಿ ಹಿಡಿದ ಆಸ್ತಿ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರೆದು ಖರೀದಿ ಕಾಲಕ್ಕೆ ನಾವು ಪ್ರತ್ಯೇಕವಾಗಿ ವಾಸಿಸುತ್ತಿದ್ದೇವು ಎಂದು ನುಡಿದಿರುತ್ತಾರೆ. ಕರಬಸಪ್ಪ ಮೂಗನಾಗಿದ್ದರಿಂದ ಕುಟುಂಬದ ವ್ಯವಹಾರವನ್ನು ನನ್ನ ಗಂಡನೆ ನಿರ್ವಹಿಸುತ್ತಿದ್ದ ಎಂದರೆ ಸರಿಯಲ್ಲ. ನಾವು ಹಾಗೂ ಅವರು ಪ್ರತ್ಯೇಕವಾಗಿ ವಾಸವಾಗಿದ್ದೇವು. ಕುಟುಂಬದ ಜಮೀನುಗಳಿಂದ ಹಾಗೂ ಹೋಟಲ್ ವ್ಯವಹಾರದಿಂದ ಬಂದಂತಹ ಆದಾಯದಿಂದ ದಾವಾ ಸ್ವತ್ತನ್ನು ಖರೀದಿಸಲಾಗಿದೆ ಎಂದರೆ ಸರಿಯಲ್ಲ. ಕರಬಸಪ್ಪನವರು ಓದಲು ಬರೆಯಲು ಬಾರದ ಕಾರಣ ದಾವಾ ಸ್ವತ್ತನ್ನು ನನ್ನ ಗಂಡನ ಹೆಸರಿಗೆ ಖರೀದಿ ಮಾಡಲಾಗಿದೆ ಎಂದರೆ ಸರಿಯಲ್ಲ. 2008 ರವರೆಗೂ ನಾವು ಒಟ್ಟಿಗೆ ವಾಸವಾಗಿದ್ದೇವು ಎಂದರೆ ಸರಿಯಲ್ಲ. ದಾವಾ ಸ್ವತ್ತು ನನ್ನ ಗಂಡನ ಸ್ವಯಾರ್ಜಿತ ಆಸ್ತಿ ಎಂದು ಓ.ಎಸ್. ನಂಃ 25/2008 ರಲ್ಲಿ ಸುಳ್ಳು ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ.

3. ನನ್ನ ಗಂಡ ಹೋಟೆಲ್ ವ್ಯವಹಾರ ನಡೆಸುತ್ತಿದ್ದ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿದಾರರು ಮುಂದುವರೆದು ಪರವಾನಿಗೆ ಹಾಗೂ ಅದರ ಮೇಲೆ ಬ್ಯಾಂಕ್ ಲೋನ್ ಪಡೆದ ಬಗ್ಗೆ ದಾಖಲೆಗಳಿದ್ದು, ಅವಶ್ಯಕವಿದ್ದರೆ ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ. ರೂ. 5,00,000/- ಗಳ ಲೋನನ್ನು ಚಿಕ್ಕೇರೂರಿನ ಅರ್ಬನ್ ಕೋ - ಆಪರೇಟಿವ್ ಸೊಸೈಟಿಯಿಂದ 2003 ರಲ್ಲಿ ಪಡೆದುಕೊಂಡಿರುತ್ತೇವೆ. 2005 ರಲ್ಲಿ ನನ್ನ ಗಂಡ

ಓ. ಎಸ್. ನಂಃ 119/2022

**ಪಿ.ಡಬ್ಲ್ಯೂಃ 1**

ಹಾಗೂ ಕರಬಸಪ್ಪ ಇಬ್ಬರು ಪರಸ್ಪರ ಒಪ್ಪಿ ತಲಾ ಅರ್ಧ ಹಿಸ್ಸೆಗೆ ತಮ್ಮ ಹೆಸರನ್ನು ದಾಖಲು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅದರಂತೆ ಪಂಚಾಯತಿ ದಾಖಲೆಗಳಲ್ಲಿ ಆಸ್ತಿ ಸಂಖ್ಯೆ 1001 ಬಿ/1 ಮತ್ತು ಆಸ್ತಿ ಸಂಖ್ಯೆ 1001 ಬಿ/2 ಎಂದು ವಿಭಜನೆಯಾಗಿ, ಆಸ್ತಿ ಸಂಖ್ಯೆ 1001 ಬಿ/1 ನನ್ನ ಹೆಸರಿನಲ್ಲಿ ಹಾಗೂ ಆಸ್ತಿ ಸಂಖ್ಯೆ 1001 ಬಿ/2 ಕರಬಸಪ್ಪನ ಹೆಸರಿನಲ್ಲಿ ನಿಪಿ-11 ಮತ್ತು 12 ರಂತೆ ದಾಖಲಾಗಿರುತ್ತದೆ ಎಂದರೆ ಮೋಸ ಮಾಡಿ ನಮೂದು ಮಾಡಿಕೊಂಡಿರುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೆ. ಸರಿ ಇದೆ ಎಂದು ಒಪ್ಪಿರುತ್ತಾರೆ.

ದಿನಾಂಕಃ 03-07-2025

Sd/-

ಹಿರಿಯ ಸಿ ಜೆ ಮತ್ತು ಜೆ. ಎಂ.ಎಫ್.ಸಿ,

ಹಿರೇಕೆರೂರು